"ಮಹಾತ್ಮರಲ್ಲಿ ಮನಸ್ಸು, ಮಾತು ಮತ್ತು ಕಾರ್ಯಗಳು ಒಂದೇ ಆಗಿರುತ್ತವೆ. ದುರಾತ್ಮರಲ್ಲಿ ಅವು ಬೇರೆ ಬೇರೆಯೇ ಆಗಿರುತ್ತವೆ." ('ಏಕಂ' ಎನ್ನುವುದನ್ನು ಎರಡು ವಿಭಿನ್ನ ಧಾಟಿಗಳಲ್ಲಿ ಉಚ್ಚರಿಸಿದಾಗ, ಬೇರೆ ಬೇರೆ ಅರ್ಥಗಳು ಬರುತ್ತವೆ.)

### ಪಾಪದ ಪ್ರೇರಣೆ

ಸಮಾಜದಲ್ಲಿ ಯಾರೂ ತಾವು ಭ್ರಷ್ಟರು ಅನ್ನಿಸಿಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ. ಆದರೆ ಯಾವುದೋ ಒಂದು ಅಗೋಚರ ದುಷ್ಟಶಕ್ತಿ ಅವರನ್ನು ಪಾಪ ಮಾಡುವುದಕ್ಕೆ ಪ್ರೇರೇಪಿಸುತ್ತಿರುತ್ತದೆ. ಅದರ ಸಂಕೋಲೆಯಿಂದ ಅವರು ಬಿಡಿಸಿಕೊಳ್ಳಲಾರರು. ಪಾಪಕ್ಕೆ ಪ್ರೇರಣೆಯನ್ನು ನೀಡುವ ಈ ಅಂಶದ ಬಗ್ಗೆ ಶ್ರೀಕೃಷ್ಣನು ಅರ್ಜುನನಿಗೆ ಹೀಗೆ ಎಚ್ಚರಿಕೆ ಕೊಡುತ್ತಾನೆ:

**ಕಾಮ ಏಷ ಕ್ರೋಧ ಏಷ ರಜೋಗುಣಸಮುದ್ಭವಃ।**
**ಮಹಾಶನೋ ಮಹಾಪಾಪ್ಮಾ ವಿದ್ಧ್ಯೇನಮಿಹ ವೈರಿಣಮ್॥**

(*ಭಗವದ್ಗೀತೆ,* ೩:೩೭)

"ಯಾವುದನ್ನು ಕಾಮವೆಂದು ಕರೆಯಲಾಗುವುದೋ ಅದೇ ಕ್ರೋಧವೂ ಆಗಿದೆ. ಇದು ರಜೋಗುಣದಿಂದ ಉತ್ಪನ್ನವಾದದ್ದು. ಇದು ಎಲ್ಲವನ್ನೂ ಕಬಳಿಸಿಹಾಕುವಂಥದ್ದು, ಮಹಾಪಾಪಕಾರಿ ಯಾದದ್ದು. ಇದನ್ನೇ ವೈರಿಯೆಂದು ತಿಳಿ."

ಶ್ರೀಕೃಷ್ಣನು ಮುಂದುವರಿದು ಹೀಗೆ ಹೇಳುತ್ತಾನೆ: ಹೊಗೆಯಿಂದ ಅಗ್ನಿ, ಕೊಳೆಯಿಂದ ಕನ್ನಡಿ, ಪೊರೆಯಿಂದ ಗರ್ಭ ಹೇಗೆ ಮುಚ್ಚಿರುತ್ತವೆಯೋ ಅದೇ ರೀತಿ, ಕಾಮವು ನಮ್ಮಲ್ಲಿ ಅಂತರ್ಗತವಾಗಿರುವ ಜ್ಞಾನವನ್ನು ಆವರಿಸುತ್ತದೆ. ಇದರರ್ಥ, ಕಾಮವು ನಮ್ಮಲ್ಲಿರುವ ಸಹಜ ಸಾಧುಪ್ರವೃತ್ತಿಯನ್ನು ಮುಚ್ಚಿಹಾಕುತ್ತದೆ, ಪಾಪಕಾರ್ಯಗಳನ್ನು ಎಸಗುವಂತೆ ಪ್ರೇರೇಪಿಸುತ್ತದೆ. ಕಾಮವೆಂಬುದು ಜ್ಞಾನಿಗಳ ನಿತ್ಯವೈರಿಯಾಗಿದೆ. ಅದು ಒಬ್ಬ ಮನುಷ್ಯನ ಇಂದ್ರಿಯ, ಮನಸ್ಸು ಮತ್ತು ಬುದ್ಧಿಗಳಲ್ಲಿ ಆಶ್ರಯ ಪಡೆದುಕೊಂಡು, ಅವುಗಳ ಮೂಲಕ ಕಾರ್ಯವೆಸಗುತ್ತದೆ; ಆ ಮೂಲಕ ಜೀವಿಯನ್ನು ಮೋಹಗೊಳಿಸುತ್ತದೆ. ಹೀಗಾಗಿ ಇಂದ್ರಿಯಗಳನ್ನು ನಿಯಂತ್ರಿಸಲು ಶ್ರೀಕೃಷ್ಣನು ಕರೆ ನೀಡುತ್ತಾನೆ:

**ತಸ್ಮಾತ್ತ್ವಮಿಂದ್ರಿಯಾಣ್ಯಾದೌ ನಿಯಮ್ಯ ಭರತರ್ಷಭ।**
**ಪಾಪ್ಮಾನಂ ಪ್ರಜಹಿ ಹ್ಯೇನಂ ಜ್ಞಾನವಿಜ್ಞಾನನಾಶನಮ್॥**

(*ಭಗವದ್ಗೀತೆ,* ೩:೪೧)

"ಆದ್ದರಿಂದ ಓ ಅರ್ಜುನ! ನೀನು ಮೊದಲು ಇಂದ್ರಿಯಗಳನ್ನು ನಿಯಂತ್ರಣದಲ್ಲಿ ಇಟ್ಟುಕೋ. ಆ ಮೂಲಕ ಜ್ಞಾನ ಮತ್ತು ವಿಜ್ಞಾನಗಳನ್ನು ನಾಶಪಡಿಸುವ, ಮಹಾಪಾಪಿಯಾದ ಕಾಮವನ್ನು ನಾಶಮಾಡು."

ಹೀಗೆ ಎಲ್ಲ ಅಕಾರ್ಯಗಳನ್ನು ಮಾಡುವುದಕ್ಕೆ ಕಾಮವೇ ಮೂಲಕಾರಣವೆಂದು ಶ್ರೀಕೃಷ್ಣನು ಗುರುತಿಸುತ್ತಾನೆ. ಇಂದ್ರಿಯಗಳ ಹತೋಟಿಯಿಂದಲೇ ಕಾಮದ ಹತೋಟಿ ಸಾಧ್ಯ; ಆಗ ಮಾತ್ರ ನಮ್ಮನ್ನು ಕವಿದಿರುವ ಮೋಹ ಕಳೆಯುತ್ತದೆ ಎಂಬ ಮನೋವೈಜ್ಞಾನಿಕ ಪರಿಹಾರವನ್ನು ಕೂಡ ಅವನು ನೀಡುತ್ತಾನೆ.

### ಅರ್ಥಮನರ್ಥಂ

ಕಾಮವು ಹಲವಾರು ಆಯಾಮಗಳಲ್ಲಿ ಮನುಷ್ಯನನ್ನು ಮೋಹಗೊಳಿಸಿ ಅಧಃಪತನಕ್ಕೆ ನೂಕುತ್ತದೆ. ಅದರಲ್ಲಿ ಮುಖ್ಯ ವಾದುದೆಂದರೆ, ಧನಾಸಕ್ತಿ. ಧನವು ವಿವಿಧ ಬಗೆಯ ಭೋಗಗಳ ಬಯಕೆಗಳನ್ನು ತೀರಿಸಿಕೊಳ್ಳುವುದಕ್ಕೆ ಅವಶ್ಯವಾದ ಸಾಧನ. ಹೀಗಾಗಿ ಭೋಗಕಾಮಿಯಾದವನು ಧನಕಾಮಿಯೂ ಆಗಿರುತ್ತಾನೆ. ಅಥವಾ, ಇನ್ನೊಂದು ದೃಷ್ಟಿಯಲ್ಲಿ ನೋಡುವುದಾದರೆ, ಅತಿಯಾದ ಧನಸಂಗ್ರಹವು, ಮಾನವನಲ್ಲಿ ಅಡಗಿರುವ ಪ್ರಾಪಂಚಿಕ ಭೋಗದ ಅಭೀಪ್ಸೆಯನ್ನು ಹೆಚ್ಚಾಗಿ ಉದ್ದೀಪನಗೊಳಿಸುತ್ತದೆ. ಏಕೆಂದರೆ ಆ ಅಭೀಪ್ಸೆಯನ್ನು ಹಣದಿಂದ ಸುಲಭವಾಗಿ ಪಡೆದುಕೊಳ್ಳುವ ಅವಕಾಶ ಅಂಥ ವ್ಯಕ್ತಿಗೆ ದೊರಕಿರುತ್ತದೆ. ಭೋಗಲಾಲಸೆಯು ಹೆಚ್ಚಿದಂತೆಲ್ಲ, ಅದಕ್ಕೆ ಬೇಕಾದ ಧನಾರ್ಜನೆಯ ಲಾಲಸೆಯೂ ಅಧಿಕವಾಗುತ್ತ ಹೋಗುತ್ತದೆ. ಹೀಗೆ ಇವೆರಡೂ ಪರಸ್ಪರ ಅವಲಂಬಿತವಾಗಿ ಮಾನವನ ವಿವೇಕಪ್ರಜ್ಞೆಯನ್ನು ಹಾಳುಮಾಡು ತ್ತವೆ. ಆಗ ಆ ವ್ಯಕ್ತಿಯ ನೈತಿಕಪ್ರಜ್ಞೆಯು ಹಿಂದಕ್ಕೆ ಸರಿದು, ಅದರಿಂದ ಉಂಟಾಗಬಹುದಾಗಿದ್ದ ಭಯವಾಗಲಿ, ಲಜ್ಜೆಯಾಗಲಿ ಕ್ರಮೇಣ ಉಡುಗಿಹೋಗುತ್ತವೆ. **ಕಾಮಾತುರಾಣಾಂ ನ ಭಯಂ ನ ಲಜ್ಜಾ** – ಕಾಮಾತುರನಾಗಿರುವವನಿಗೆ ಭಯವೂ ನಾಚಿಕೆಯೂ ಇರುವುದಿಲ್ಲ.

ಹಾಗೆಂದೇ, ಶ್ರೀರಾಮಕೃಷ್ಣರು ಕಾಮಿನಿಕಾಂಚನಗಳೇ ಮಾಯೆ ಎಂದು ಹೇಳುತ್ತಾರೆ. ಸ್ವಾಮಿ ವಿವೇಕಾನಂದರು, ಅಮೆರಿಕದ ಜನರಿಗೆ, "ನೀವು ಪೂಜಿಸುತ್ತಿರುವುದು ಡಾಲರ್ ಎಂಬ ದೇವರನ್ನು" ಎಂದು ಕಟುವಾಗಿ ನಿಂದಿಸುತ್ತಾರೆ. ಶ್ರೀಶಂಕರಾ ಚಾರ್ಯರು, **ಅರ್ಥಮನರ್ಥಂ ಭಾವಯ ನಿತ್ಯಂ** – ಧನವೆಂಬುದು ಅನರ್ಥಕಾರಿಯಾದುದು ಎಂದು ಯಾವಾಗಲೂ ಭಾವಿಸುತ್ತಿರು ಎಂದು ಎಚ್ಚರಿಕೆ ನೀಡುತ್ತಾರೆ. ಸುಭಾಷಿತವೊಂದು, **ಸರ್ವೇ ಗುಣಾಃ ಕಾಂಚನಮಾಶ್ರಯಂತಿ** – ಎಲ್ಲ ಗುಣಗಳೂ ಹಣವನ್ನೇ ಆಶ್ರಯಿಸಿರುತ್ತವೆ ಎಂದು ವ್ಯಂಗ್ಯಮಾಡುತ್ತದೆ. ವರಕವಿ ದ.ರಾ. ಬೇಂದ್ರೆ ಅವರು, "ಕುರುಡು ಕಾಂಚಾಣಾ ಕುಣಿಯುತಲಿತ್ತೋ, ಕಾಲಿಗೆ ಬಿದ್ದವರ ತುಳಿಯುತಲಿತ್ತೋ" ಎಂದು ಹಾಡಿದ್ದಾರೆ. "ಹಣ ಕಂಡರೆ ಹೆಣವೂ ಬಾಯಿ ಬಿಡುತ್ತದೆ" ಎಂಬ ಗಾದೆ ಪ್ರಸಿದ್ಧವಾಗಿಯೇ ಇದೆ. ನಮ್ಮ ಜೀವನದಲ್ಲಿ ಧನ–ಸಂಪತ್ತುಗಳ ಸರ್ವವ್ಯಾಪಕತೆಯನ್ನೂ, ಅದರ ಮೇಲಿನ ಅತ್ಯಾಶೆಯ ಭೀಕರ ಪರಿಣಾಮವನ್ನೂ ಮೇಲಿನ ಹೇಳಿಕೆಗಳು ಎತ್ತಿತೋರಿಸುತ್ತವೆ.


### ಉಪಸಂಹಾರ

ನೈಜ ಆಧ್ಯಾತ್ಮಿಕತೆಯು ತ್ಯಾಗದ ಭಾವನೆಯ ಅಡಿಪಾಯದ ಮೇಲೆ ನಿಂತಿದೆ. ಬಾಹ್ಯತ್ಯಾಗಕ್ಕಿಂತಲೂ ಮಾನಸಿಕ ತ್ಯಾಗವೇ ನೈಜಸಂನ್ಯಾಸವೆಂದು ಭಗವದ್ಗೀತೆ ಹೇಳುತ್ತದೆ. ಇದನ್ನು ನಾವು ಅರ್ಥೈಸಿಕೊಂಡು, ನೈಜ ಆಧ್ಯಾತ್ಮಿಕತೆಯತ್ತ ಸಾಗಬೇಕು; ಆಧ್ಯಾತ್ಮಿಕ ತತ್ತ್ವ, ಸಾಧನೆ ಮತ್ತು ಆದರ್ಶಗಳು ಮಾತ್ರವೇ ನಮಗೆ ಮುಖ್ಯ ವಾಗಬೇಕು. ಅಂತರಂಗದಲ್ಲಿ ಪ್ರಾಮಾಣಿಕತೆ, ಬಾಹ್ಯದಲ್ಲಿ ಸನ್ನಡತೆ, ತನ್ನ ಲೋಪದೋಷಗಳ ಬಗ್ಗೆ ವಿನಮ್ರತೆ – ಇವಿದ್ದರೆ ಅಲ್ಲಿ ಭ್ರಷ್ಟತೆ ಇರದು. ಈಗಿನ ಪರಿಸ್ಥಿತಿಯಲ್ಲಿ ಇವೇ ಅತ್ಯವಶ್ಯವಾದುವು.

# ಸ್ವಾಮಿ ವಿವೇಕಾನಂದರ ದೃಷ್ಟಿಯಲ್ಲಿ ನೈತಿಕತೆ

ಸ್ವಾಮಿ ಅನುಪಮಾನಂದ

ಸ್ವಾಮಿ ವಿವೇಕಾನಂದರ ಪ್ರಕಾರ ನೀತಿಯು ತ್ಯಾಗದ ಮೇಲೆ ನಿಂತಿದೆ. ತ್ಯಾಗವು ಆಧ್ಯಾತ್ಮಿಕ ದೃಷ್ಟಿಕೋನದಿಂದ ಪರಿಪ್ಲುತವಾಗಿರಬೇಕು. ಈ ಅಂಶವನ್ನು ಸರಳವಾಗಿ ತಿಳಿಸಿಕೊಟ್ಟಿರುವ ಸ್ವಾಮೀಜಿಯವರು ಹೈದರಾಬಾದಿನ ರಾಮಕೃಷ್ಣ ಮಠದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಉತ್ತಮ ಲೇಖಕರು ಮತ್ತು ಭಾಷಣಕಾರರು.



ಭಗವದ್ಗೀತೆಯ ಹದಿನಾರನೆಯ ಅಧ್ಯಾಯದಲ್ಲಿ ಭಗವಾನ್ ಶ್ರೀಕೃಷ್ಣನು ಈ ರೀತಿಯಾಗಿ ಹೇಳಿದ್ದಾನೆ (೧೬ : ೧–೩):

ಅಭಯಂ ಸತ್ವಸಂಶುದ್ಧಿಃ ಜ್ಞಾನಯೋಗವ್ಯವಸ್ಥಿತಿಃ ।
ದಾನಂ ದಮಶ್ಚ ಯಜ್ಞಶ್ಚ ಸ್ವಾಧ್ಯಾಯಸ್ತಪ ಆರ್ಜವಮ್ ॥

ಅಹಿಂಸಾ ಸತ್ಯಮಕ್ರೋಧಃ ತ್ಯಾಗಃ ಶಾಂತಿರಪೈಶುನಮ್ ।
ದಯಾ ಭೂತೇಷ್ವಲೋಲುಪ್ತ್ವಂ
ಮಾರ್ದವಂ ಹ್ರೀರಚಾಪಲಮ್ ॥

ತೇಜಃ ಕ್ಷಮಾ ಧೃತಿಃ ಶೌಚಮದ್ರೋಹೋ ನಾತಿಮಾನಿತಾ ।
ಭವಂತಿ ಸಂಪದಂ ದೈವೀಮಭಿಜಾತಸ್ಯ ಭಾರತ ॥

"ಎಲೈ ಅರ್ಜುನ, ಅಭಯ, ಅಂತಃಕರಣಶುದ್ಧಿ, ಜ್ಞಾನ ಯೋಗದಲ್ಲಿ ನೆಲೆನಿಲ್ಲುವುದು, ದಾನ, ದಮ, ಯಜ್ಞ, ವೇದಾಧ್ಯಯನ, ತಪಸ್ಸು, ಸರಳತೆ, ಅಹಿಂಸೆ, ಸತ್ಯ, ಅಕ್ರೋಧ, ತ್ಯಾಗ, ಶಾಂತಿ, ಚಾಡಿ ಹೇಳದಿರುವಿಕೆ, ಭೂತದಯೆ, ವಿಷಯಲಂಪಟತನ ಇಲ್ಲದಿರುವಿಕೆ, ಮೃದುಸ್ವಭಾವ, ನಾಚಿಕೆ, ಚಪಲತೆಯಿಲ್ಲದಿರುವಿಕೆ, ತೇಜಸ್ಸು, ಕ್ಷಮೆ, ಶುಚಿತ್ವ ಹಾಗೂ ದ್ರೋಹ ಮತ್ತು ದುರಭಿಮಾನಗಳು ಇಲ್ಲದಿರುವಿಕೆ –ಈ ಗುಣಗಳು ದೈವೀಸಂಪತ್ತಿನಿಂದ ಹುಟ್ಟಿದವನಿಗೆ ಉಂಟಾಗುವುವು."

ಈ ಮೇಲಿನ ಶ್ಲೋಕಗಳಲ್ಲಿ ಭಗವಾನ್ ಶ್ರೀಕೃಷ್ಣನು ಮುಖ್ಯವಾಗಿರುವ ಜೀವನಮೌಲ್ಯಗಳನ್ನು ಪಟ್ಟಿಮಾಡಿ ಹೇಳಿದ್ದಾನೆ. ಜೀವನಮೌಲ್ಯಗಳು ಎಂದರೇನು ಎನ್ನುವ ಪ್ರಶ್ನೆಗೆ ಮೇಲಿನ ಮೂರು ಶ್ಲೋಕಗಳಲ್ಲಿ ಸ್ಪಷ್ಟವಾದ ಉತ್ತರವಿದೆ. ಧರ್ಮಕ್ಕೂ ಜೀವನಮೌಲ್ಯಗಳಿಗೂ ಇರುವ ನಿಕಟ ಸಂಬಂಧ ಇದರಿಂದ ನಮಗೆ ತಿಳಿದುಬರುತ್ತದೆ. ಈ ಮೇಲಿನ ಸದ್ಗುಣಗಳನ್ನು ಹೊಂದಿದ ಮಹಾಪುರುಷರು ಎಲ್ಲ ಸಮಾಜದಲ್ಲೂ ಇರುತ್ತಾರೆ. ಯಾವ ಸಮಾಜದಲ್ಲಿ ಇಂತಹ ಗುಣಗಳನ್ನು ಹೊಂದಿರುವ ವ್ಯಕ್ತಿಗಳ ಸಂಖ್ಯೆ ಹೆಚ್ಚಾಗಿರುವುದೋ ಅಂತಹ ಸಮಾಜ ಉನ್ನತಿಯನ್ನು ಹೊಂದುತ್ತದೆ. ಇದಕ್ಕೆ ತದ್ವಿರುದ್ಧವಾದ ಗುಣಗಳನ್ನು ಹೊಂದಿರುವ ವ್ಯಕ್ತಿಗಳ ಸಂಖ್ಯೆ ಹೆಚ್ಚಿದ್ದರೆ ಅಂತಹ ಸಮಾಜ ಅಧಃಪತನದೆಡೆಗೆ ಸಾಗುತ್ತದೆ.

ನಾವೀಗ ವಿಜ್ಞಾನ ಮತ್ತು ತಂತ್ರಜ್ಞಾನದ ಯುಗದಲ್ಲಿ ಇದ್ದೇವೆ. ಇಂದಿನ 'ಕೊಳ್ಳುಬಾಕ' ಸಂಸ್ಕೃತಿಯಿಂದಾಗಿ ಮನುಷ್ಯನ ಬಯಕೆಗಳು ಹೆಚ್ಚುತ್ತಲೇ ಇವೆ. ವ್ಯಕ್ತಿಸ್ವಾತಂತ್ರ್ಯದ ಹೆಸರಿನಲ್ಲಿ ಇಂದು ಸ್ವೇಚ್ಛಾಚಾರ ಮತ್ತು ಸ್ವಾರ್ಥ ಮನೋಭಾವಗಳು ಹೆಚ್ಚಾಗುತ್ತಿವೆ. ಕೇವಲ ಕಾನೂನು ರಚನೆಯ ಮೂಲಕ ಸಮಾಜವನ್ನು ಸ್ವಸ್ಥವಾಗಿ ಇಡಬಹುದು ಎಂದು ಆಧುನಿಕರು ತಿಳಿದಂತೆ ಕಾಣುತ್ತದೆ. ಶರೀರ ಶ್ರಮವನ್ನು ಕಡಮೆ ಮಾಡಲು ಆಧುನಿಕ ಯಂತ್ರಗಳನ್ನು ಕಂಡುಹಿಡಿದರೂ ವ್ಯಕ್ತಿಯು ನೆಮ್ಮದಿಯ ಜೀವನವನ್ನು ನಡೆಸುವುದರ ಬದಲು, ಅನೇಕ ರೀತಿಯ ಮನೋವೇದನೆಗಳನ್ನು ಅನುಭವಿಸುತ್ತಿದ್ದಾನೆ. ಎಲ್ಲೆಡೆ ಹಿಂಸೆ, ಕ್ರೌರ್ಯ ಮತ್ತು ಅಸಂತೃಪ್ತಿಗಳು ಹೆಚ್ಚುತ್ತಿವೆ. ವಿಪರ್ಯಾಸವೆಂದರೆ ಉದಾತ್ತ ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳಿಗೆ ತವರೂರಾದ ಭಾರತವು ಕೂಡ ಇದಕ್ಕೆ ಹೊರತಾಗಿಲ್ಲ. ಇದಕ್ಕೆ ಕಾರಣವೇನು? ನಾವು ಯಾವ ದಿಕ್ಕಿನಲ್ಲಿ ಸಾಗುತ್ತಿದ್ದೇವೆ?

ಜೀವನಮೌಲ್ಯಗಳಿಲ್ಲದೇ ವ್ಯಕ್ತಿಯ ಚಾರಿತ್ರ್ಯನಿರ್ಮಾಣ ಅಸಾಧ್ಯ. ಚರಿತ್ರಹೀನ ವ್ಯಕ್ತಿಯಲ್ಲಿ ಅಸಾಧಾರಣ ಪ್ರತಿಭೆಯಿದ್ದರೂ ಅದರ ಅರಿವು ಆತನಿಗೆ ಇರುವುದಿಲ್ಲ. ತನ್ನ ಮೇಲೆ ತನಗೆ ನಿಗ್ರಹವಿಲ್ಲದೆ ಅನೇಕ ರೀತಿಯ ಲಾಲಸೆಗಳಿಗೆ ಬಲಿಯಾಗುವ ವ್ಯಕ್ತಿಯು ಉತ್ತಮ ಜೀವನವನ್ನು ನಡೆಸಲಾರ. ಆತನಲ್ಲಿ ದೌರ್ಬಲ್ಯಗಳೇ ಅಧಿಕವಾಗಿರುವುದರಿಂದ ತಾನು ಕೈಗೊಂಡ ಎಲ್ಲ ಪ್ರಯತ್ನದಲ್ಲಿಯೂ ಅವನು ವಿಫಲನಾಗುತ್ತಾನೆ; ಇಂದ್ರಿಯಸುಖವೇ ಜೀವನದ ಪರಮಾದರ್ಶ ಎಂದುಕೊಂಡು ಕ್ಷಣಭಂಗುರವಾಗಿದ್ದರೂ ಅವುಗಳನ್ನೇ ಬೆಂಬತ್ತುತ್ತಾನೆ. ಉಜ್ವಲ ಭವಿಷ್ಯತ್ತನ್ನು ರೂಪಿಸಿಕೊಳ್ಳುವುದರ ಬದಲು ಕೈತಪ್ಪಿ ಹೋದ